Reg.no KR.N 12 - For Influential Publicity - 14-10-76

ಸತ್ಯವಾದಿ
SATYAVADI

60th Diamond Jubilee Year
೬೦ನೇ ವಜ್ರಮಹೋತ್ಸವ ವರ್ಷ
★ Satyavadi Daily, Mysore 4 ★

ಸ್ಥಾಪಕರು : ಅರಮನೆ ಏರಸ್ತೇದಾರ್ ಎಂ. ವಿ. ಸುಬ್ಬರಾವ್
ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

ಶ್ರೀ ವೀರಪ್ಪ ಮೋಯಿಲಿ ಅವರ ಹೇಳಿಕೆ

ಈ ತಿಂಗಳು 10 ನೇ ತಾರೀಖು ಮೈಸೂರು ನಗರ ಯುವಕ ಕಾಂಗ್ರೆಸ್ ಕಛೇರಿಯಲ್ಲಿ ಕರ್ನಾಟಕದ ಸಣ್ಣ ಕೈಗಾರಿಕಾ ಮಂತ್ರಿಗಳಾದ ಶ್ರೀ ವೀರಪ್ಪ ಮೋಯಿಲಿಯವರು ನಗರ ಯುವಕ ಕಾಂಗ್ರೆಸ್ ಮುಂದಾಳುಗಳನ್ನು ಉದ್ದೇಶಿಸಿ ಭಾಷಣ ಮಾಡುತ್ತಾ, ಇಂದಿನ ಯುವಕರು ತಮ್ಮತಮ್ಮಲ್ಲಿ ಸಂಪೂರ್ಣ ವಿಶ್ವಾಸವನ್ನು ಬೆಳೆಸಿಕೊಂಡು ಪ್ರಜಾಪ್ರಭುತ್ವವನ್ನು ಬೆಳೆಸಲು ಅನುಕೂಲವಾಗಬೇಕು ಮತ್ತು ಪಟ್ಟ ಭದ್ರ ಹಿತಾಶಕ್ತಿಗಳನ್ನು ಕೆತ್ತೊಗೆದು ಪ್ರಾಮಾಣಿಕ ವಿಶ್ವಾಸವನ್ನು ನಮ್ಮ ನಾಯಕರಲ್ಲಿ ತೋರಿಸಿ ಪಕ್ಷದ ಹಿತದೃಷ್ಟಿಯಿಂದ ಶಿಸ್ತಿನಿಂದ ಇಂದಿನ ಯುವಕರು ಕೆಲಸ ಮಾಡಬೇಕು ಎಂದರು

ಬೆಂಗಳೂರು ನಗರ ಯುವಕ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಗಣೇಶರಾವ್, ಉಪಾಧ್ಯಕ್ಷ ಶ್ರೀ ಗುರುರಾಜ್ ಮತ್ತು ಶ್ರೀ ಪಿ ಶಿವಣ್ಣ ಈ ಸಂದರ್ಭದಲ್ಲಿ ಮಾತನಾಡಿದರು.

ನಗರ ಯುವಕ ಕಾಂಗ್ರೆಸ್ ಸಂಚಾಲಕರಾದ ಶ್ರೀ ಪ್ರಕಾಶ್ ಸ್ವಾಗತಿಸಿದರು ಕಾರ್ಯದರ್ಶಿ ಶ್ರೀ ಬಿ ಶಿವಲಿಂಗಪ್ಪ ವಂದಿಸಿದರು.

○

ವಜ್ರಮಹೋತ್ಸವ ಆಚರಣೆ

ಟೆನಿಸ್ ಮುಂತಾದ ಚಾಂಪಿಯನ್‌ಷಿಪ್ ಟೂರ್ನಮೆಂಟ್‌ಗಳು ಮೈಸೂರು ಕಾಸ್ಮೊಪಾಲಿಟನ್ ಕ್ಲಬ್ ಈ ವರ್ಷ ಆಚರಣೆ ಮಾಡುವ ವಜ್ರಮಹೋತ್ಸವ ವರ್ಷದಲ್ಲಿ ನಡೆಯುವುದು ಹೆಚ್ಚಿಗೆ ವಿವರಗಳನ್ನು ಕ್ರೀಡಾ ಸಮಿತಿಯ ಕಾರ್ಯದರ್ಶಿಗಳಿಂದ ಪಡೆಯಬಹುದು.

★

ಮೈಸೂರು ದಸರಾ ವಸ್ತುಪ್ರದರ್ಶನ

16 ನೇ ತಾ: ಸಂಜೆ 6 ಗಂಟೆಗೆ ಶ್ರೀ ಎಂ. ಎಲ್. ಶಿವಯ್ಯ ಅವರಿಂದ ಪ್ರಾಡ್ಡು ಗ್ರಾಂಟಿಕೆ 7 ಗಂಟೆಗೆ ಅರುಣ ಕುಮಾರ್ ಮತ್ತು ವೃಂದದವರಿಂದ ಶ್ರೀ ಕೃಷ್ಣ ವಿಜಯ ನಾಟಕ

17 ನೇ ತಾ 6 ಗಂಟೆ ಕೊಡಗಿನ ಕಲಾವಿದರಿಂದ ಗಿರಿಜನರ ಕುಣಿತ 7 ಗಂಟೆಗೆ ಚಿತ್ರ ಸಂಗೀತ ನಿರ್ದೇಶಕ ಎಂ. ರಂಗರಾವ್ ಸೈಟ್.

★

ಕರ್ನಾಟಕ ಸರ್ಕಾರದ ಸುಗ್ರೀವಾಜ್ಞೆ

ಬೆಂಗಳೂರು — ಕರ್ನಾಟಕ ಬಾಡಿಗೆ ಹತೋಟಿ ಶಾಸನದ 14 ನೆಯ ಪೆಕ್ಷನ್ನಿನಲ್ಲಿರುವ ಅವಧಿ ನಿರ್ಬಂಧ ತೆಗೆದು ಬಾಡಿಗೆದಾರರು ಯಾವಾಗ ಬೇಕಾದರೂ ಬಾಡಿಗೆ ನಿಷ್ಕರ್ಷೆ ಮಾಡಲು ಅರ್ಜಿ ಸಲ್ಲಿಸುವಂತೆ ಸುಗ್ರೀವಾಜ್ಞೆ ಹೊರಡಿಸಲಾಗಿದೆ.

ಹತ್ತು ವರ್ಷದ ವರೆಗೆ ಕಠಿಣ ಸಜೆ

ಖಟ್ಮಂಡು — ನೇಪಾಳದಲ್ಲಿ ಶಾಂತಿ, ಶಾಸನ ಮತ್ತು ಶಿಸ್ತುಗಳನ್ನು ಭಂಗ ಮಾಡಿದ ಆಪಾದನೆಗೆ 9 ಜನರಿಗೆ 10 ವರ್ಷ ಜೈಲುವಾಸ ವಿಧಿಸಲಾಗಿದೆ.

ನಾಲ್ವರು ಮಕ್ಕಳ ಮರಣ

ಹುಬ್ಬಳ್ಳಿ — ರಾಣಿಬೆನ್ನೂರು ತಾಲ್ಲೂಕು ಮೇದ್ಲೇರಿ ಗ್ರಾಮದ ಒಂದು ಹಳೆ ದೇವಾಲಯ ಕುಸಿದು ಚಿಕ್ಕ ವಯಸ್ಸಿನ 4 ಮಕ್ಕಳು ಸತ್ತವು ಯಜಮಾನ ತೊಂದರೆ ಇಲ್ಲದೆ 7 ಜನ ತಪ್ಪಿಸಿಕೊಂಡರು

○

ಇಬ್ಬರ ಮರಣ

ಬ್ರೋಚ್ — ಒಂದು ಪೂಜಾ ಸ್ಥಾನದಲ್ಲಿ 2 ತಂಡಗಳಿಗಾದ ಕೊಡೆದಾಟದಲ್ಲಿ ಇಬ್ಬರು ಯುವಕರು ಕೊಲ್ಲಲ್ಪಟ್ಟು 6ಜನ ಗಾಯಗೊಂಡರು

★

ಎಕ್ಸ್‌ಟ್ರಾಡಿಷನ್ ಅಜ್ಜಿ

ಲಂಡನ್ — ಭಾರತದಲ್ಲಿ 2 ನೇ ಶತಮಾನದ 2 ವರೆ ಲಕ್ಷ ಪೌಂಡು ಬೆಲೆ ಬಾಳುವ ಅಮೂಲ್ಯ ಕಂಬಗಳೆಂಬ ಪುರಾತನ ಕಂಬಗಳನ್ನು ಭಾರತದಿಂದ ಹೊರಕ್ಕೆ ಕಳ್ಳ ಸಾಗಾಣಿಕೆ ಮಾಡಿದ ಆಪಾದನೆ ಮೇಲೆ ಮೋಸ, ಕಳ್ಳತನ ಹಾಗೂ ಫೋರ್ಜರಿ ಅಪರಾಧಗಳಿಗೆ ಒಳಗಾಗಿರುವ ವ್ಯಾನೋಹರ ನರಿವ್ವಾನ್ ಮತ್ತು ಅತನ ಸಹೋದರರನ್ನು ಭಾರತದಲ್ಲಿ ವಿಚಾರಣೆಗಾಗಿ ಎಕ್ಸ್‌ಟ್ರಡಿಷನ್ ಅಜ್ಜಿಯನ್ನು ಮಾಡಿದರು ಆಪಾದಿತ ಲಂಡನ್ ಜೈಲಿನಲ್ಲಿ ಇದ್ದಾನೆ.

●

ಮುಖ್ಯ ಮಂತಿ ಯವರ ಸೂಚನೆ

ಮಂಗಳೂರು — ಅಕ್ರಮವಾಗಿ ವಿಧಿಸದಿರುವ ಕಡೆಗಳಲ್ಲೆಲ್ಲ ಅಕ್ರಮವಾಗಿ ವಿಧಿಸುವಂತೆ ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸ್‌ರವರು ಪುರಭವನದಲ್ಲಿ ಅದ ಭಾರಿ ಸಭೆಯಲ್ಲಿ ಪೌರಸಭೆಗಳನ್ನು ಒತ್ತಾಯ ಮಾಡಿದರು.

★ ಬೆಂಗಳೂರು ಲಾಲಬಾಗಿನಲ್ಲಿ ವೀರ ಸೌಧ ನಿರ್ಮಾಣಕ್ಕೆ ಕೊಟ್ಟಿದ್ದ ನಿವೇಶನವನ್ನು ಸರ್ಕಾರಿ ವಾಪಸು ಪಡೆದಿದೆ ಬೇರೆ ಕಡೆ ಕಟ್ಟಲಾಗುವುದೆಂ

ಕತ್ತೆಗಳ ಮೆರವಣಿಗೆ

ಆನೆಗುಂದಿ — ಮಳೆ ದೇವರು ವರುಣನ ಪ್ರೀತ್ಯರ್ಥವಾಗಿ ಜನತೆ ಅಲಂಕೃತ ಕತ್ತೆಗಳ ಮೆರವಣಿಗೆ ನಡೆಸಿದರು

○

ಸೂಜಿ ತೆಗೆಯಲು ಅಪರೇಷನ್

ಅಥೆನ್ಸ್ — ಪ್ರವೇಶ ಊರಿನ ಹನ್ನೊಂದು ವರ್ಷದ ಓರ್ವ ಶಾಲೆ ವಿದ್ಯಾರ್ಥಿಯ ಕಣ್ಣುಗಳ ಮತ್ತು ಮೆದುಳು ಈ ಮಧ್ಯೆ 2 ಅಂಗುಲ ಉದ್ದದ ಸೂಜಿ 5 ವರ್ಷಗಳಿಂದ ಇದ್ದು ಶಸ್ತ್ರಚಿಕಿತ್ಸೆಗಾಗಿ ಇಲ್ಲಿಗೆ ಬಂದಿದ್ದಾನೆ ಹಿಂದೆಸೆ ಶಸ್ತ್ರ ಚಿಕಿತ್ಸೆಯಲ್ಲಿ ಈ ಸೂಜಿ ಅಲ್ಲಿ ಬಿಡಲ್ಪಟ್ಟಿರುವುದಾಗಿ ವೈದ್ಯರು ಅಭಿಪ್ರಾಯಪಟ್ಟಿದ್ದಾರೆ

●

ನೀರು ಸರಬರಾಜಿಗೆ ಒಪ್ಪಿಗೆ

ಬೆಂಗಳೂರು — ಕರ್ನಾಟಕ ಸರ್ಕಾರ ಸೌಹಾರ್ದ ಸದ್ಭಾವನೆಯಿಂದ ತಮಿಳುನಾಡಿಗೆ 5 ಟಿ ಎಂ ಸಿ ಅಡಿ ಹೆಚ್ಚು ಕಾವೇರಿ ನೀರು ಬಿಡಲು ಒಪ್ಪಿದೆ.

○

ಆದಾಯ ಏರಿಕೆ

ನವದೆಹಲಿ — 75-76 ನೇ ಸಾಲಿನಲ್ಲಿ ಂಪ್ಟ್ರೀಯ ಆದಾಯ ಶೇಕಡ 65 ಹೆಚ್ಚಿರುವುದಾಗಿ ಅಂದಾಜು ಮಾಡಲಾಗಿದೆ.

★

ಚವಾಣ್‌ರ ನುಡಿ

ಸ್ಯಾನ್‌ಫ್ರಾನ್ಸಿಸ್ಕೊ — ರಷ್ಯದೊಡನೆ ನಮ್ಮ ಸ್ನೇಹ ಅಮೇರಿಕದ ಗೆಳೆತನ ಬೆಲೆಯಿಂದಲ್ಲೆಂದು ಭಾರತ ವಿದೇಶ ಮಂತ್ರಿ ಶ್ರೀ ಚವನ್ ತಿಳಿಸಿದರು.

★ ಬೆಂಗಳೂರು — ಮೈಸೂರು ಮೃಗಾಲಯಕ್ಕೆ ಒಂದು ಗಂಡು ಮತ್ತು ಎರಡು ಹೆಣ್ಣು ಜಿಂಪಾಂಜಿಗಳು ಜರ್ಮನಿಯಿಂದ ಬೇಗನೆ ಬರಲಿದೆ.

ಕೋಟಿ ನಾಮಾರ್ಚನೆ

ಶೃಂಗೇರಿ— ಶ್ರೀ ಶಾರದಾದೇವಿ ಸನ್ನಿಧಿಯಲ್ಲಿ ಅಕ್ಟೋಬರ್ ೪ ರಿಂದ ಕೋಟಿ ನಾಮಾರ್ಚನೆ ಪ್ರಾರಂಭವಾಗಿದ್ದು, ೩೩ 22 ರವರೆಗೆ ನಡೆಯಲಿದ್ದು, ಅಂದು ಲಲಿತಾ ಪೂಜೆಯೊಂದಿಗೆ ಸಮಾಪ್ತಿಗೊಳ್ಳುವುದು – ಈ ಅರ್ಚನೆಗೆ ವಿವಿಧ ರಾಜ್ಯಗಳಿಂ ಪಂಡಿತರು ಆಗಮಿಸಿದ್ದಾರೆ.

○

ಹಾವುಗಳಿದ್ದ ಪೆಟ್ಟಿಗೆ

ಬೊಂಬಾಯಿ— ವಿಕ್ಟೋರಿಯಾ ಟರ್ಮಿನಸ್ ಸ್ಟೇಷನ್ನಿಗೆ ಒಂದು ಉಪನಗರ ಲೋಕಲ್ ರೈಲು ಬಂದಾಗ, ಅದರಲ್ಲಿ ಒಂದು ವಾರಸುದಾರರಿಲ್ಲದ ಪೆಟ್ಟಿಗೆ ರೈಲು ಅಧಿಕಾರಿಗಳಿಗೆ ಸಿಕ್ಕಿತು : ಅದನ್ನು ಕೆಳಗಿಳಿಸಿ ತೆರೆದು ನೋಡಿದಾಗ ಅದರಲ್ಲಿ ಎರಡು 8 ಅಡಿ ಉದ್ದದ ಭಾರಿ ನಾಗರ ಹಾವುಗಳಿದ್ದವು ; ಅವುಗಳನ್ನು ಅಂಧೇರಿಯ ಹಾವಿನ ಕ್ಷೇತ್ರಕ್ಕೆ ಕಳುಹಿಸಲಾಯಿತು.

ಗೋರಕ್ಷಣ'ಕ್ಕೆ ಸಕಲ ನೆರವು ನೀಡಿ

ಗೋರಕ್ಷಣೆ, ಪ್ರಾಣಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, " ಗೋರಕ್ಷಣ ' ವು ತನ್ನ ಬೆಳ್ಳಿ ಹಬ್ಬ ನೆರವೇರಿಸಿರುವದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, ' ಗೋರಕ್ಷಣ " ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

' ಗೋರಕ್ಷಣ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

" ಸತ್ಯವಾದಿ " ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ " ಸತ್ಯವಾದಿ " ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದಿವಂಗತ ಶ್ರೀ ಜಗದ್ಗುರುಗಳವರ, ಶ್ರೀ. ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಷ್ಟ್ರದ ಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನಿರ್ವಹಣೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ.

SHAKTI SUDHA

A Superb Tonic

ಭಾರತದಲ್ಲಿ ಗೋವಧೆ ಪೂರ್ಣ ನಿಶ್ಶೇಧವಾಗಲಿ



Protect the Cow

ವುಡ್‌ಲಾಂಡ್ 15 10 76 ರಿಂದ

ಅಮೋಘ ಆರಂಭ

ಮಾ

ಹಿಂದಿ

ಕಲರ್

ಧರ್ಮೇಂದ್ರ ಹೇಮಮಾಲಿನಿ ಅಭಿನಯ

ದಿನ 4 ಪ್ರದರ್ಶನಗಳು

ಅಪೆರಾ 15 10 76ರಿಂದ

ಕುಮಾರ ವಿಜಯಂ

ಕಮಲಾ ಹಾಸನ್ ಜಯಚಿತ್ರ ಅಭಿನಯ

ತಮಿಳು ಪ್ರತಿ ದಿನ 3 ಪ್ರದರ್ಶನಗಳು

Edited Printed and Published by Dharmapracharaniratа M S. Krishna Rao (Proprietor) at the Satyavadi Press, Chamarajapuram Mysore 4